**ಪಿ.ಡಬ್ಲ್ಯು-01 - ಎಂ.ಕೆ. ಯೋಗೇಶ್**

**ಸಾಕ್ಷಿಯನ್ನು ದಿನಾಂಕಃ 18.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ. ಜಿ.ಪಿ.ಆರ್. ವಕೀಲರಿಂದಃ**

ದಿನಾಂಕಃ 09.10.2015 ರಂದು ನಾನು ಹಾಗು 2 ನೇ ವಾದಿ ಪ್ರತಿವಾದಿಗೆ ಬರೆದುಕೊಟ್ಟ ನೋಂದಾಯಿತ ಕ್ರಯ ಒಪ್ಪಂದ ಕರಾರು ಪತ್ರದ ಆನ್ ಲೈನ್ / ಡಿಜಿಟಲ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-6** ಎಂದು ಮತ್ತು ಅದೇ ದಿನ ಅಂದರೆ ದಿನಾಂಕಃ 09.10.2015 ರಂದು ಪ್ರತಿವಾದಿ ನನಗೆ ಹಾಗು 2 ನೇ ವಾದಿಗೆ ಬರೆದುಕೊಟ್ಟ ನೋಂದಾಯಿತವಲ್ಲದ ಒಪ್ಪಿಗೆ ಪತ್ರವನ್ನು ಹಾಜರುಪಡಿಸಿರುತ್ತೇನೆ. (ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಸದರಿ ದಾಖಲೆಯು ನೋಂದಾಯಿತವಲ್ಲದ ಒಪ್ಪಿಗೆ ಪತ್ರವಾಗಿದ್ದು ವಾದಿಗಳು ಸದರಿ ದಾಖಲೆಯ ಮೇಲೆ ದಿನಾಂಕಃ 19.08.2024 ರಂದು ಅಗತ್ಯವಿರುವ ಮುದ್ರಾಂಕ ಶುಲ್ಕ ಪಾವತಿಸಿರುವುದು ಕಂಡುಬಂದಿರುತ್ತದೆ). ಆದ್ದರಿಂದ ಸದರಿ ಒಪ್ಪಿಗೆ ಪತ್ರವನ್ನು **ನಿ.ಪಿ.-7** ಎಂದು ಗುರುತಿಸಲಾಯಿತು.

**ಪಾಟಿ ಸವಾಲು: ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಿರುತ್ತಾರೆ. ಆದ್ದರಿಂದ ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಪಾಟೀ ಸವಾಲಿಗಾಗಿ ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**